

# ಹನಿ ಹನಿ ನೆನಪುಗಳು





**ಗಾಯಗೊಂಡ ಹದ್ದನ್ನು ಮನೆಮಂದಿಯಂತೆ ಉಪಚರಿಸಿದ್ದಾಯಿತು. ಬೀಳ್ಕೊಡುವಾಗ ಹದ್ದಿಗೂ ತಳಮಳ, ನಮಗೂ ಕಳವಳ.**

**ಆರ್.ಕೆ. ಮಧು**

ಮಳೆ ಬಂದ ಮರುದಿನದ ಮುಂಜಾನೆ ಮಣ್ಣು ಹಾದಿಯಲ್ಲಿ ನಡೆಯುವಾಗ ನೆಲದ ಮೇಲೆ ಬಿದ್ದಿದ್ದ ಹಕ್ಕಿಯೊಂದು ಕಾಣಿಸಿತು. ಎಚ್ಚರ ತಪ್ಪಿ ಬಿದ್ದಿದ್ದ ಹದ್ದನ್ನು ಎಚ್ಚರಿಕೆಯಿಂದ ಪರೀಕ್ಷಿಸಿದೆ. ಇನ್ನೂ ಕುಟುಕು ಜೀವ ಇತ್ತು. ತೀರಾ ನಿತ್ರಾಣವಾಗಿದ್ದ ಅದರ ಮೇಲಿದ್ದ ಇರುವೆಗಳ ಓಡಿಸಿ, ಗಾಯಗೊಂಡಿದ್ದ ಹದ್ದನ್ನು ಎತ್ತಿಕೊಂಡು ಮನೆಗೆ ಬಂದೆ.

ಒದ್ದೆಮುದ್ದೆಯಾಗಿದ್ದ ಹದ್ದನ್ನು ಎಳೆ ಬಿಸಿಲಲ್ಲಿ ಇಟ್ಟೆ. ಬಿಸಿ ಏರುತ್ತಿದ್ದಂತೆ ಅದು ತುಸು ಕಣ್ಣುಬಿಟ್ಟಿತು. ಮೆಲ್ಲನೆ ಎತ್ತಿಕೊಂಡು ಹೊಟ್ಟೆ, ಕಾಲಿನ ಭಾಗದಲ್ಲಿದ್ದ ಮಣ್ಣನ್ನು ಸ್ವಚ್ಛಗೊಳಿಸಿ ನೋಡಿದೆ. ಕಾಲು ತುಸು ಬಾತಿತ್ತು. ಬಹುಶಃ ಜಗಳದಿಂದಲೋ ವಿದ್ಯುದಾಘಾತದಿಂದಲೋ ಗಾಯವಾಗಿತ್ತು. ಕಾಲಬೆರಳು ಮುದುರಿತ್ತು. ಎಡ ರೆಕ್ಕೆ ತುಸು ಮಡಚಿತ್ತು.

ವೈದ್ಯರಿಗೆ ಫೋನ್ ಮಾಡಿದೆ. ಅವರ ಸಲಹೆಯಂತೆ ಡೆಟಾಲ್‌ನಿಂದ ಗಾಯ ಸ್ವಚ್ಛಗೊಳಿಸಿ, 'ರೇಬಿಪೂರ್' ಹಚ್ಚಿದೆ. ವಿಟಮಿನ್ ಡ್ರಾಪ್ಸ್ ಉಣಿಸಿದ್ದಾಯಿತು. ಅಂಗಡಿಯಿಂದ ಬೋನ್‌ಲೆಸ್ ಚಿಕನ್ ತಂದಾಯಿತು. ಆದರೆ ಹದ್ದು ತಿನ್ನಲಿಲ್ಲ. ಮುಷ್ಕರ ಹೂಡಿತು. ನಾವೇ ಅದರ ಬಾಯಿ ಅಗಲಿಸಿ ಮಕ್ಕಳಂತೆ ಗಂಟಲಿಗೆ ಮೆಲ್ಲನೆ ಹಾಕಿದೆವು. ಗುಳುಂ ಎಂದು ನುಂಗಿತು. ಊಟದ ನಂತರ ಅದನ್ನು ಒಂದು ಬುಟ್ಟಿಯಲ್ಲಿ ಹಾಕಿ ಮಲಗಿಸಿದೆ.

ನಾನು ಉಪಚರಿಸಿದ್ದು ಜೇನು ಡೇಗೆ ಹಕ್ಕಿ. 'ಹನಿ ಬಜರ್ಡ್' ಎಂದು ಅದಕ್ಕೆ ಇಂಗ್ಲಿಷ್‌ನಲ್ಲಿ ಹೆಸರು. ಓರಿಯೆಂಟಲ್, ವೈಟ್ ಐಯ್ಡ್, ಹಿಮಾಲಯನ್, ಲಾರ್ಜ್ ಲೆಗ್ಡ್, ಅಪ್ಪರ್ ಲ್ಯಾಂಡ್ – ಹೀಗೆ ಹಲವು ಪ್ರಭೇದಗಳು 'ಹನಿ ಬಜರ್ಡ್'ಗೆ ಸಂಬಂಧಿಸಿದಂತಿವೆ. ನನಗೆ ಸಿಕ್ಕಿದ್ದುದು ಬಿಳಿ ಕಣ್ಣಿನ ಡೇಗೆ. ಹೊಲ, ಗದ್ದೆ, ಕುರುಚಲು ಕಾಡು, ಊರ ಹೊರವಲಯ ಅದರ ನೆಚ್ಚಿನ ತಾಣ. ಮಿಡತೆ, ಕ್ರಿಮಿ, ಹೆಂಟೆ, ಜೇನು. ಹಾವು ಇವುಗಳ ಆಹಾರ. ಕೆಲವೊಮ್ಮೆ ಸಣ್ಣ ಹಕ್ಕಿಗಳನ್ನೂ ತಿನ್ನುತ್ತವೆ.

ಈಗ ಹದ್ದಿನ ಆರೈಕೆ ನಮ್ಮ ದಿನದ ಮುಖ್ಯ ಕೆಲಸವಾಯಿತು. ಪ್ರತಿ 2 ಗಂಟೆಗೊಮ್ಮೆ ಅದಕ್ಕೆ ಮಾಂಸ ತಿನ್ನಿಸುತ್ತಿದ್ದೆವು. ತಿಂಡಿ ತಿನ್ನುತ್ತಿದ್ದ ಹದ್ದು ಔಷಧಿ ಕುಡಿಯುತ್ತಿರಲಿಲ್ಲ. ಉಗಿಯುತ್ತಿತು. ಪಿಲ್ಲರ್‌ನಿಂದ ಚೂರು ಚೂರು ಕುಡಿಸುತ್ತಿದ್ದೆವು. ಮೂರು ದಿನಗಳ ನಂತರ ತುಸು ಚೇತರಿಸಿಕೊಂಡ ಹದ್ದಿಗೆ ನಾವು 'ಹನಿ' ಎಂದು ನಾಮಕರಣ ಮಾಡಿದೆವು.

ಗಾಯ ವಾಸಿಯಾಗುತ್ತಿತ್ತು. ತುಸು ಶಕ್ತಿಬಂದ ಹನಿ ಕೈಯಿಂದ ಮಾಂಸ ಕಿತ್ತುಕೊಳ್ಳುತ್ತಿತ್ತು. ಒಮ್ಮೆ ನಾ ಎಚ್ಚರ ತಪ್ಪಿದ್ದಕ್ಕೆ ನನ್ನ ಕೈ ಅದರ ಕೊಕ್ಕಿಗೆ ಸಿಲುಕಿ ರಕ್ತ ಒಸರಿತ್ತು. ಒಂದು ವಾರವಾಗಿತ್ತು. ಈಗ ಹನಿ ಹೊರಗೆ ಬಂದು ರೆಕ್ಕೆ ಬಡಿಯುತ್ತಿತ್ತು. ಇನ್ನು ಹಾರುವ ಸಮಯ ಎಂದೆಣಿಸಿದೆವು. ಮನೆಯ ಹೊರಗಿನ ಮರದ ಬಳಿ ಬಿಟ್ಟರೆ ಮೆಲ್ಲನೆ ರೆಕ್ಕೆ ಬಡಿದು ತುಸು ದೂರ ಹಾರಿ ಸುಸ್ತಾಗಿ ಕುಳಿತುಕೊಂಡಿತು. ಮತ್ತೆ ಮನೆಗೆ ಕರೆದುಕೊಂಡು ಬಂದೆ.

ಹದಿನೈದು ದಿನಗಳ ಆರೈಕೆಯಿಂದ ಹನಿ ತುಸು ಚೇತರಿಸಿಕೊಂಡಿದ್ದಳು. ಒಂದು ಬೆಳಿಗ್ಗೆ ಹನಿಗೆ ಚೆನ್ನಾಗಿ ಮಾಂಸ ತಿನ್ನಿಸಿದೆವು. ತೋಟಕ್ಕೆ ಕರೆದುಕೊಂಡು ಹೋಗಿ ಮೆಲ್ಲನೆ ಹೊರಬಿಟ್ಟೆವು. ಹದಿನೈದು ನಿಮಿಷ ಕದಲದೇ ಕುಳಿತು ಸುತ್ತಲೂ ನೋಡಿತು, ನಮ್ಮನ್ನು ಬಿಟ್ಟು ಹೋಗಲು ಮನಸ್ಸಿಲ್ಲವೋ ಎಂಬಂತೆ. ನಮಗಂತೂ ಅದು ಹಾರುವುದನ್ನು ನೋಡುವ ಕಾತುರ ಹಾಗೂ ಅಗಲಿಕೆಯ ನೋವು. ಈ ಭಾವೋತ್ಕರ್ಷದ ನಡುವೆಯೇ ಹನಿ, ನೆಲದಿಂದ ಪುಟ್ಟ ಮರದ ಬೊಡ್ಡೆಯ ಮೇಲೆ ಹಾರಿ ಕುಳಿತು, ಎಲ್ಲರನ್ನೂ ಒಮ್ಮೆ ನೋಡಿ ರಿವ್ವನೆ ತೆಂಗಿನ ಮರವನೇರಿತು. ಹನಿಯೊಂದಿಗಿನ ಮಧುರ ಸಿಹಿ ನೆನಪಿನೊಂದಿಗೆ ಮನೆ ಕಡೆ ನಡೆದೆ.